## ೨

# ಹೊಸ ಒಡಂಬಡಿಕೆಯಲ್ಲಿ ಧರ್ಮಾಚರಣೆ ಹಾಗೂ ತಿಳುವಳಿಕೆ

*"ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ" (ಇಬ್ರಿಯ 11:6).*

ದೇವರ ಚಿತ್ತಕ್ಕೆ ಮಾನವನ ಉತ್ತರದ ಬಗ್ಗೆ ಐದು ತತ್ವಗಳು ಹಳೇ ಒಡಂಬಡಿಕೆ ಯಲ್ಲಿಯಂತೆ ಹೊಸ ಒಡಂಬಡಿಕೆಯಲ್ಲಿಯೂ ಕಂಡು ಬರುತ್ತವೆ:

(1) ಮಾನವನ ಯೋಗ್ಯತೆಯ ಕ್ರಿಯೆಗಳ ಮೇಲೆ ಅಲ್ಲದೆ ವ್ಯಕ್ತಿಯ ವಿಶ್ವಾಸದ ಮೇಲೆ ಅವಲಂಭಿಸಿ ಆಶೀರ್ವಾದವು ಕೊಡಲ್ಪಡಬಹುದು (ಮತ್ತಾಯ 9:27-30).

(2) ಕುರುಡು ವಿಧೇಯತೆ ಬೇಕಾಗುವ ನಂಬಿಕೆಯನ್ನು ಅವಲಂಭಿಸಿ ಆಶೀರ್ವಾದವು ಕೊಡಲ್ಪಡಬಹುದು. ಅಂದರೆ ಆಶೀರ್ವಾದದಲ್ಲಿ ನಂಬಿಕೆ ಅಥವಾ ತಿಳುವಳಿಕೆಯಿಲ್ಲದ ಕ್ರಿಯೆ (ಅಪೊಸ್ತಲರ ಕೃತ್ಯ 3:4).

(3) ಪರಿಣಾಮವನ್ನು ಸಾಧಿಸಲಿಕ್ಕೆ ಕ್ರಿಯೆಯನ್ನು ಪ್ರೇರಿಸುವ ನಂಬಿಕೆಯನ್ನು ಅವಲಂಭಿಸಿ ಆಶೀರ್ವಾದವು ಕೊಡಲ್ಪಡಬಹುದು. ಜಗತ್ತನ್ನು ಜಯಿಸುವುದು (ಮಾನವ ಕ್ರಿಯೆಯನ್ನು ಒಳಗೊಂಡಿರುವ ಪರಿಣಾಮ) ಯೇಸುವಿನಲ್ಲಿಯ ನಂಬಿಕೆಯ ಪರಿಣಾಮ ವಾಗಿದೆ (1 ಯೋಹಾನ 5:4, 5).

(4) ಕ್ರಿಯೆ ಮತ್ತು ಪರಿಣಾಮದ ಮಧ್ಯದಲ್ಲಿಯ ತಿಳಿದಿರುವ ತಾರ್ಕಿಕ ಸಂಬಂಧ ದೊಂದಿಗಿನ ನಂಬಿಕೆಯ ಮೇಲೆ ಅವಲಂಭಿಸಿದ ಕಾರ್ಯದ ಕಾರಣದಿಂದ ಆಶೀರ್ವಾ ದವು ಕೊಡಲ್ಪಡಬಹುದು (ಯೋಹಾನ 9:1-7).

(5) ವಿಶ್ವಾಸವಿದ್ದವರಿಗೆ ಅಲ್ಲ ಆದರೆ ಬೇರೆ ಇತರರಿಗೆ ಆಶೀರ್ವಾದವು ಕೊಡಲ್ಪಡ ಬಹುದು (ಮತ್ತಾಯ 9:1-7).

ಆದುದರಿಂದ ಬಾಪ್ತಿಸ್ಮವು ಇವುಗಳಲ್ಲಿ ಒಂದು ಮೂಲ ಸೂತ್ರದ ಮೇಲೆ ಆಚರಿಸಲ್ಪಡಬಹುದು.

### ನಂಬಿಕೆ ಮತ್ತು ಕುರುಡು ವಿಧೇಯತೆ

ಒಂದು ಆಜ್ಞೆಗೆ ಕುರುಡು ವಿಧೇಯತೆಯ ಕಾರ್ಯಕ್ಕೆ ಆಶೀರ್ವಾದ ಕೊಡುವದಕ್ಕೆ ದೇವರಲ್ಲಿ ನಂಬಿಕೆಯ ಮೇಲೆ ಅವಲಂಭಿಸಿದ ಕಾರ್ಯಕ್ಕಿಂತ ಭಿನ್ನವಾದ ತಿಳುವಳಿ ಕೆಯೂ ಅನುಭವವೂ ಬೇಕಾಗಿತ್ತು. ಕುರುಡು ವಿಧೇಯತೆಗೆ ಆಜ್ಞಾಪಿಸಲ್ಪಟ್ಟದ್ದರ ತಿಳುವಳಿಕೆ ಮಾತ್ರ ಬೇಕಾಗಿತ್ತು, ಆದರೆ ವಿಶ್ವಾಸಕ್ಕೆ ಏನು ಆಜ್ಞಾಪಿಸಲ್ಪಟ್ಟಿದೆ ಎಂಬುದರ ಹಾಗೆಯೇ ಆ ಆಜ್ಞೆ ಸಂಬಂಧಿಸಿದ ಲಾಭ, ಆಶೀರ್ವಾದ ಅಥವಾ ಎಚ್ಚರಿಕೆಯ ತಿಳುವಳಿಕೆ

ಬೇಕಾಗಿತ್ತು. ನಂಬಿಕೆಯಿರುವ ವ್ಯಕ್ತಿಯು ಪ್ರತ್ಯೇಕವಾದ ಕಾರ್ಯವು ಯಾಕೆ ಬೇಕಾಗಿದೆ, ಅದನ್ನು ಎಲ್ಲಿ ಮಾಡಬೇಕು ಅಥವಾ ನಿರೀಕ್ಷಿಸುವ ಪರಿಣಾಮಕ್ಕೆ ಅದರ ತಾರ್ಕಿಕ ಸಂಬಂಧವನ್ನು ಅರ್ಥ ಮಾಡಿಕೊಳ್ಳುವ ಅವಶ್ಯಕತೆಯಿಲ್ಲ. ಆಜ್ಞೆಗೆ ಸರಿಯಾಗಿ ಉತ್ತರ ಕೊಡಲು ಸಾಕಷ್ಟು ತಿಳುವಳಿಕೆ, ಕಾರ್ಯವನ್ನು ದಾಟಿ ಯಾವುದಾದರೊಂದರಲ್ಲಿ ನಂಬಿಕೆ ಯಿರುವ ಅಗತ್ಯತೆಯಿದೆ. ಇಲ್ಲದಿದ್ದರೆ ಕಾರ್ಯವು ಕೇವಲ ಕುರುಡು ವಿಧೇಯತೆಯಾ ಗುವುದು. ವಾಗ್ದಾನದೊಂದಿಗಿನ ಆಜ್ಞೆಯು ಆ ವಾಗ್ದಾನವು ಏನಾಗಿದೆ ಎಂಬುದರ ತಿಳುವಳಿಕೆ ಮಾತ್ರವೇ ಅಲ್ಲದೆ ದೇವರು ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸುವನೆಂದು ಆತನಲ್ಲಿ ನಂಬಿಕೆಯೂ ಸಹ ಬೇಕಾಗುತ್ತದೆ.

ಅಬ್ರಹಾಮನಿಗೆ ಅವನ ಮಗ ಇಸಾಕನನ್ನು ಬಲಿಪೀಠದ ಮೇಲೆ ಅರ್ಪಿಸಲು ದೇವರ ಆಜ್ಞೆಯು ನಂಬಿಕೆಯ ಕಾರ್ಯದಂತೆ ತಿಳಿಯ ಬೇಕಾಗಿರಲಿಲ್ಲ, ಕೇವಲ ಕುರುಡು ವಿಧೇಯತೆ ಬೇಕಾಗಿತ್ತೆಂದು ಕೆಲವರು ಆಕ್ಷೇಪಿಸಬಹುದು. ಇದು ಸತ್ಯವಾದದ್ದಲ್ಲ, ಯಾಕಂದರೆ ಅಬ್ರಹಾಮನೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದನು (ಆದಿಕಾಂಡ 17:17-19), ಅಬ್ರಹಾಮನು ಈ ವಾಗ್ದನವನ್ನು ಅರ್ಥ ಮಾಡಿಕೊಂಡನು, ಹಾಗೂ ನಂಬಿದನು (ಇಬ್ರಿಯ 11:17-19). ಇಸಾಕನನ್ನು ಕೊಲ್ಲುವದರಿಂದ ಈ ವಾಗ್ದಾನವು ರದ್ದಾಗುವುದು; ಆದುದರಿಂದ ಅವನಿಂದ ಬೇಕಾಗಿದ್ದ ಕಾರ್ಯವು ಅವನ ವಿಶ್ವಾಸವನ್ನು ಪರೀಕ್ಷಿಸುವುದು, ಅದು ದೇವರು ಮಾಡಿದ ವಾಗ್ದಾನದ ತಿಳುವಳಿಕೆಯ ಮೇಲೆ ಅವಲಂಬಿಸಿತ್ತು.

ನಂಬಿಕೆಗೆ ಆಜ್ಞೆಯೊಂದಿಗೆ ಸಂಬಂಧಿಸಿ ವಾಗ್ದಾನಗಳ ತಿಳುವಳಿಕೆ ಬೇಕಾಗಿತ್ತು, ಆದರೆ ಸರಿಯಾದ ಉದ್ದೇಶಕ್ಕಾಗಿ ಆ ಒಂದು ಕಾರ್ಯವೂ ಬೇಕಾಗಿತ್ತು. ಕುರುಡು ವಿಧೇಯತೆಗೆ ಅವೆರಡೂ ಬೇಕಾಗಿರಲಿಲ್ಲ.

## ಹೊಸ ಒಡಂಬಡಿಕೆಯ ಉದಾಹರಣೆಗಳು

ಪೇತ್ರ ಯೋಹಾನರು ದೇವಾಲಯದೊಳಗೆ ಹೋಗುತ್ತಿದ್ದಾಗ ಒಬ್ಬ ಭಿಕ್ಷಕನನ್ನು ಸಂದರ್ಶಿಸಿದರು. ಅವನು ನಲ್ವತ್ತಕ್ಕಿಂತಲೂ ಹೆಚ್ಚು ವರ್ಷಗಳಿಂದ ಕುಂಟನಾಗಿದ್ದನು (ಅಪೊಸ್ತಲರ ಕೃತ್ಯ 3:2; 4:22). ಯೇಸು ಕ್ರಿಸ್ತನ ಬಲದಿಂದ ಆ ಕುಂಟನನ್ನು ಅವರು ಸ್ವಸ್ಥಪಡಿಸಿದರು (ಅಪೊಸ್ತಲರ ಕೃತ್ಯ 4:10). ಕುರುಡು ವಿಧೇಯತೆ ಮತ್ತು ನಂಬಿಕೆಯ ಮೇಲೆ ಅವಲಂಭಿಸಿದ ಪ್ರತಿಕ್ರಿಯೆಯು ಈ ವಿಷಯದಲ್ಲಿ ಸ್ಪಷ್ಟವಾಗಿದೆ. "ನಮ್ಮನ್ನು ನೋಡು" (ಅಪೊಸ್ತಲರ ಕೃತ್ಯ 3:4) ಎಂದು ಆ ಮನುಷ್ಯನಿಗೆ ಪೇತ್ರನು ಹೇಳಿದನು. ಈ ಆಜ್ಞೆಗೆ ವಿಧೇಯನಾಗಿರುವದಕ್ಕೆ, ಅವರ ಕಡೆಗೆ ನೋಡುವದಕ್ಕೆ ತಿಳುವಳಿಕೆಯಾಗಲಿ, ವಾಗ್ದತ್ತ ಆಶೀರ್ವಾದದಲ್ಲಿ ನಂಬಿಕೆಯಾಗಲೀ ಇಲ್ಲವೇ ಯೋಗ್ಯ ಉದ್ದೇಶವಾಗಲೀ ಬೇಕಾಗಿರಲಿಲ್ಲ. ಕೇವಲ ಕುರುಡು ವಿಧೇಯತೆ ಬೇಕಾಗಿತ್ತು.

ಆ ಮನುಷ್ಯನು ನಿಜವಾಗಿ ಅವರ ಕಡೆಗೆ ನೋಡಿದ್ದು ತಪ್ಪು ಕಾರಣಕ್ಕಾಗಿ, "... ಅವರಿಂದ ಏನಾದರೂ ದೊರಕೀತೆಂದು ನಿರೀಕ್ಷಿಸಿದನು" (ಅವನು ತಾನು ಬೇಡುತ್ತಿದ್ದುದನ್ನು, ಭಿಕ್ಷೆಯನ್ನು, ದಾನವನ್ನು ನಿರೀಕ್ಷಿಸುತ್ತಿದ್ದನು, ಅಪೊಸ್ತಲರ ಕೃತ್ಯ 3:5). ಹೀಗಿದ್ದರೂ, "ನಮ್ಮನ್ನು ನೋಡು" ಎಂದು ಪೇತ್ರನು ಹೇಳಿದಾಗ ಕುರುಡು ವಿಧೇಯತೆಯಲ್ಲಿ ವಿಧೇಯನಾದನು.

ಪೇತ್ರ ಯೋಹಾನರ ಮುಂದಿನ ಅಪ್ಪಣೆಗೆ ಕುರುಡು ವಿಧೇಯತೆಗಿಂತ ಹೆಚ್ಚಿನದು ಬೇಕಾಗಿತ್ತು. ಯಾಕಂದರೆ ಅದು ಆಶೀರ್ವಾವಾದವನ್ನು ಒಳಗೊಂಡಿತ್ತು.

ಆದರೆ ತಿಳುವಳಿಕೆಯೂ ವಿಶ್ವಾಸವೂ ಬೇಕಾಗಿತ್ತು. ಆ ಮನುಷ್ಯನು ತಾನು ನಡೆದಾಡಲಾರೆನೆಂದು ತಿಳಿದು ಕೊಂಡಿದ್ದನು: ಅವನು ಅದನ್ನು ಸುಮಾರು ನಾಲ್ವತ್ತು ವರ್ಷಗಳಿಂದಲೂ ತಿಳಿದಿದ್ದನು (ಅಪೊಸ್ತಲರ ಕೃತ್ಯ 4:22). ನಡೆಯುವ ಪ್ರಯತ್ನಕ್ಕೆ ವಿಧೇಯತೆಯು ಮಾತ್ರವೇ ಅಲ್ಲದೆ ಯೇಸುವಿನಲ್ಲಿ ನಂಬಿಕೆಯೂ ಬೇಕಾಗಿತ್ತು, ಆತನ ಹೆಸರಿನಲ್ಲಿ ನಡೆದಾಡಲು ಅವನು ಆಜ್ಞಾಪಿಸಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯ 3:6).

ಅಪ್ಪಣೆಯಲ್ಲಿ ಏನು ವಾಗ್ದಾನ ಮಾಡಿದೆಯೆಂಬುದನ್ನು ಅವನು ಅರ್ಥಮಾಡಿ ಕೊಂಡಿರದಿದ್ದರೆ, ಅಪ್ಪಣೆಯಲ್ಲಿ ನಂಬಿಕೆಯಿಂದ ಅವನು ವರ್ತಿಸುತ್ತಿರಲಿಲ್ಲ. ಕುರುಡು ವಿಧೇಯತೆಯು ಅವನ ಕೇವಲ ಆಯ್ಕೆಯಾಗುತ್ತಿತ್ತು. ಯೇಸುವಿನ ಹೆಸರಿನ ಮುಖಾಂತರ ನಡೆಯುವ ಶಕ್ತಿಯ ವಾಗ್ದಾನವನ್ನು ಅವನು ಅರ್ಥ ಮಾಡಿಕೊಂಡದ್ದರಿಂದ, ಯೇಸುವಿನ ಹೆಸರಿನ ಮುಖಾಂತರ ತಾನು ನಡೆದಾಡಲು ಶಕ್ತನಾಗುವೆನೆಂದು ನಂಬಿ ಅವನು ವಿಶ್ವಾಸದಿಂದ ಕಾರ್ಯಮಾಡಲು ಶಕ್ತನಾದನು (ಅಪೊಸ್ತಲರ ಕೃತ್ಯ 3:16). ದೇವರು ಮಾತ್ರವೇ ನೋಡುವ ಹಾಗೂ ಮನುಷ್ಯನು ಮಾತ್ರವೇ ಕಲ್ಪಿಸುವ ಈ ನಂಬಿಕೆಯು ಅವನನ್ನು ಕೃತ್ಯಕ್ಕೆ ಪ್ರೇರೇಪಿಸಿತು; ಈ ತಳಹದಿಯ ಮೇಲೆ ದೇವರು ಅವನನ್ನು ಗುಣಪಡಿಸಿದನು. ಅವನಲ್ಲಿ ಈ ವಿಶ್ವಾಸ ಇರದಿದ್ದರೆ ದೇವರು ಅವನನ್ನು ಗುಣಪಡಿ ಸುತ್ತಿರಲಿಲ್ಲ. ಎಲ್ಲಾ ಅದ್ಭುತ ಕಾರ್ಯಗಳಿಗೆ ವಿಶ್ವಾಸ ಅವಶ್ಯಕತೆಯಿರಲಿಲ್ಲ. ಆದರೆ ಒಂದು ಅದ್ಭುತ ಕಾರ್ಯವು ಮಾಡಲ್ಪಡಬೇಕು ಮತ್ತು ವಿಶ್ವಾಸದ ಕೊರತೆಯಿದೆಯೆಂದು ಒಬ್ಬ ವ್ಯಕ್ತಿ ಅರಿತುಕೊಂಡಾಗ ಅದ್ಭುತ ಕಾರ್ಯವು ಮಾಡಲ್ಪಡಲಿಲ್ಲ (ಮತ್ತಾಯ 13:58).

## ಫಲಿತಾಂಶದಲ್ಲಿ ನಂಬಿಕೆ

ಹಳೇ ಮತ್ತು ಹೊಸ ಒಡಂಬಡಿಕೆಯಲ್ಲಿ ತನ್ನ ಬಲದಲ್ಲಿ ಮತ್ತು ಆತನು ವಾಗ್ದಾನ ಮಾಡಿದ ಆಶೀರ್ವಾದದಲ್ಲಿಯ ನಂಬಿಕೆಯ ತಳಹದಿಯ ಮೇಲೆ ದೇವರು ಆಶೀರ್ವಾದ ವನ್ನು ವಾಗ್ದಾನ ಮಾಡಿದಾಗ, ಆತನು ಆಶೀರ್ವಾದ ಕೊಡುವ ಮೊದಲು ನಂಬಿಕೆಯೂ, ಸರಿಯಾದ ಪ್ರತಿಕ್ರಿಯೆಯೂ ಬೇಕಾಗಿತ್ತು.

ಯೇಸುವು ತನ್ನ ಸ್ವಂತ ಮನೆಯ ಕ್ಷೇತ್ರದಲ್ಲಿ ಜನರ ಅವಿಶ್ವಾಸದ ನಿಮಿತ್ತ ಆತನು ಅನೇಕ ಅದ್ಭುತ ಕಾರ್ಯಗಳನ್ನು ಮಾಡಲಿಲ್ಲ (ಮತ್ತಾಯ 13:58). ಜನರು ಒಂದು ವೇಳೆ ಆತನ ಆಜ್ಞೆಗಳಿಗೆ ದೈಹಿಕವಾಗಿ ಪ್ರತಿಕ್ರಿಯೆ ತೋರಿಸಿದ್ದರೂ ಅವರ ಅವಿಶ್ವಾಸದ ನಿಮಿತ್ತ ಅನೇಕ ಅದ್ಭುತ ಕಾರ್ಯಗಳು ಮಾಡಲ್ಪಡುತ್ತಿದ್ದಿಲ್ಲ. ಕೆಲವು ಸಂದರ್ಭಗಳಲ್ಲಿ ಕೆಲವು ರೋಗಿಗಳು ತಮ್ಮ ಪರವಾಗಿ ಕಾರ್ಯವಿಲ್ಲದಿದ್ದರೂ ಆತನಲ್ಲಿಯ ತಮ್ಮ ವಿಶ್ವಾಸದ ನಿಮಿತ್ತ ಗುಣಪಡಿಸಲ್ಪಟ್ಟರು (ಮತ್ತಾಯ 9:27-29). ಇತರರೊಂದಿಗೆ ಅವರನ್ನು ಗುಣಪಡಿಸುವ ಮೊದಲು ಕ್ರಿಯೆಯ ಅವಶ್ಯಕತೆಯಿತ್ತು (ಯೋಹಾನ 9:1-7). ಅವರಿಗೆ ಪ್ರಿಯರಾಗಿದ್ದವರ ನಂಬಿಕೆಯ ಕಾರಣದಿಂದ ಇತರರನ್ನು ಗುಣಪಡಿಸಿದನು (ಮತ್ತಾಯ 9:1-7).

ನಂಬಿಕೆ ಮತ್ತು ಯೋಗ್ಯವಾದ ಪ್ರತಿಕ್ರಿಯೆಯ ಮೇಲೆ ಅವಲಂಭಿಸಿ ಕೊಡಲ್ಪಟ್ಟ ಆಶೀರ್ವಾದಕ್ಕೆ ಕೇವಲ ವಿಧೇಯತೆಯು ಅಷ್ಟೇ ಅಲ್ಲದೆ ಅರ್ಥ ಮಾಡಿಕೊಂಡ ವಾಗ್ದಾ ನವನ್ನು ದೇವರು ನೆರವೇರಿಸುವನೆಂಬ ವಿಶ್ವಾಸವೂ ಅಗತ್ಯವಿದೆ. ಇದು ಸತ್ಯವಾಗಿರದಿದ್ದರೆ ಆಗ ನಂಬಿಕೆಯ ಅಗತ್ಯತೆಯೂ ಇರುವುದಿಲ್ಲ. ಯಾಕಂದರೆ ದೇವರು ಏನನ್ನು ವಾಗ್ದಾನ ಮಾಡಿದ್ದಾನೆ ಎಂಬುದನ್ನು ಅವನು ತಿಳಿದುಕೊಳ್ಳದಿದ್ದರೆ ಆತನು ತನ್ನ ವಾಗ್ದಾನವನ್ನು ನೆರವೇರಿಸುವನೆಂದು ದೇವರಲ್ಲಿ ಹೇಗೆ ನಂಬಿಕೆಯುಳ್ಳವನಾಗಿರುವನು? ಪೌಲನ ಪ್ರಕಾರ ವಾಗಿ, ಅಬ್ರಹಾಮನು ಯಾವುದನ್ನು ದೇವರು "ವಾಗ್ದಾನ ಮಾಡಿದ್ದಾನೋ, ಅದನ್ನು

ಸಾಧಿಸಲು ಆತನು ಶಕ್ತನಾಗಿದ್ದಾನೆ" ಎಂದಬುದನ್ನು ಸಂಪೂರ್ಣವಾಗಿ ಅರ್ಥ ಮಾಡಿ ಕೊಂಡಿದ್ದನು (ರೋಮಾಪುರ 4:20, 21). ನಂಬಿಕೆಯು ವಿಧೇಯತೆಯನ್ನಷ್ಟೇ ಅಲ್ಲದೆ ದೇವರು ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸಲು ಶಕ್ತನಾಗಿದ್ದಾನೆ ಮತ್ತು ಇಷ್ಟವುಳ್ಳ ವನಾಗಿದ್ದಾನೆ ಎಂಬುದನ್ನು ಒಳಗೊಂಡಿರುತ್ತದೆ (ಮತ್ತಾಯ 9:28 ನೋಡಿರಿ).

## ಅಭಿಪ್ರಾಯ, ಉದ್ದೇಶ, ಮತ್ತು ಕೃತ್ಯ

ಸರಿಯಾದ ಕೃತ್ಯವು ಯೋಗ್ಯವಾದ ಅಭಿಪ್ರಾಯ ಮತ್ತು ಉದ್ದೇಶದಿಂದ ಕೂಡಿರ ಬೇಕೆಂದು ಯೇಸುವೂ ಅಪೊಸ್ತಲರೂ ಸ್ಪಷ್ಟವಾಗಿ ಬೋಧಿಸಿದರು. ತನ್ನಷ್ಟಕ್ಕೆ ಸರಿಯಾದ ಕ್ರಿಯೆಯೂ ಇಲ್ಲವೇ ಯೋಗ್ಯವಾದ ಉದ್ದೇಶ ಅಥವಾ ಅಭಿಪ್ರಾಯ ತನ್ನಷ್ಟಕ್ಕೇ ದೇವರಿಂದ ಸ್ವೀಕಾರ ಯೋಗ್ಯವಾದವುಗಳಾಗಿರುವದಿಲ್ಲ.

### ನೀತಿಯ ಕೃತ್ಯಗಳು

ತಪ್ಪಾದ ಉದ್ದೇಶಕ್ಕಾಗಿರುವ ನೀತಿಯುಳ್ಳ ಕಾರ್ಯಗಳು ದೇವರಿಂದ ಬಹುಮಾನವನ್ನು ಹೊಂದುವದಿಲ್ಲವೆಂದು ಯೇಸು ಬೋಧಿಸಿದನು. "ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೋಡಿರಿ; ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯ ಹತ್ತಿರ ನಿಮಗೆ ಫಲದೊರೆಯದು" (ಮತ್ತಾಯ 6:1) ಎಂದು ಆತನು ಹೇಳಿದನು. ನೀತಿಯುಳ್ಳ ಕಾರ್ಯಗಳನ್ನು ಮಾಡುವುದು ದೇವರ ಅಪೇಕ್ಷೆಯಾಗಿದೆ (ಅಪೊಸ್ತಲರ ಕೃತ್ಯ 10:35); ಹೀಗಿದ್ದರೂ ಸರಿಯಾದ ಅಭಿಪ್ರಾಯ ಇಲ್ಲವೇ ಉದ್ದೇಶವಿಲ್ಲದೆ ನೀತಿಯುಳ್ಳ ಕಾರ್ಯಗಳನ್ನು ಮಾಡುವುದು ದೇವರಿಗೆ ಸ್ವೀಕಾರ ಯೋಗ್ಯವಾಗಿರುವದಿಲ್ಲ. ಕ್ರಿಯೆಯಲ್ಲಿ ದೇವರು ಆಸಕ್ತನಾಗಿರುವಂತೆಯೆ, ಅಭಿಪ್ರಾಯ ಮತ್ತು ಉದ್ದೇಶದಲ್ಲಿಯೂ, ಆಸಕ್ತನಾಗಿದ್ದಾನೆ.

*ಹಿಂಸೆಯನ್ನು ಸಹಿಸುವುದು.* ಒಬ್ಬನು ಸರಿಯಾದ ಕಾರಣಕ್ಕಾಗಿ ಹಿಂಸಿಸಲ್ಪಟ್ಟರೆ, ಅಂಥ ಹಿಂಸೆಯು ದೇವರಿಗೆ ಸ್ವೀಕಾರ ಯೋಗ್ಯವಾಗಿದೆ (ಮತ್ತಾಯ 5:10). ಜನರಿಂದ ಹೊಗಳಿಕೆಯನ್ನು ಪಡೆಯಲು ಕೆಲವರು ಹಿಂಸೆಯನ್ನು ಹುಡುಕುತ್ತಾರೆ; ಆದರೆ ತಪ್ಪಾದ ಉದ್ದೇಶಕ್ಕಾಗಿ ಒಬ್ಬನು ತನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ, ಅದು ಅವನಿಗೆ ಲಾಭ ತರುವದಿಲ್ಲ (1 ಕೊರಿಂಥ 13:3). ದೇವರು ಕೃತಿಯಲ್ಲಿಯಂತೆ ಉದ್ದೇಶದಲ್ಲಿಯೂ ಆಸಕ್ತನಾಗಿರುವನು.

*ಕೊಡುವಿಕೆ.* ಬಡವರಿಗೆ ಸಹಾಯ ಮಾಡಲು ದೇವರು ತನ್ನ ಶಿಷ್ಯರಿಗೆ ಆಜ್ಞಾಪಿಸಿದನು (ಗಲಾತ್ಯ 2:10). ತಪ್ಪಾದ ಉದ್ದೇಶಕ್ಕಾಗಿ ಕೊಡುವವರು ಬಡವರಿಗೆ ಸಹಾಯ ಮಾಡಬಹುದು. ಆದರೆ ಅವರು ದೇವರಿಂದ ಬಹುಮಾನವನ್ನು ಹೊಂದಿ ಕೊಳ್ಳುವದಿಲ್ಲ (ಮತ್ತಾಯ 6:2-4; 1 ಕೊರಿಂಥ 13:3).

"ತೆಗೆದು ಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚಿನ ಭಾಗ್ಯ" ಎಂದು ಯೇಸು ಹೇಳಿದ ಮಾತನ್ನು ಪೌಲನು ಉಲ್ಲೇಖಿಸಿದನು (ಅಪೊಸ್ತಲರ ಕೃತ್ಯ 20:35). ದೇವರಂತೆ ಆಗುವದರಲ್ಲಿ ಕ್ರೈಸ್ತನ ಮೂಲ ಪ್ರತ್ಯುತ್ತರವು ಕೊಡುಗೆಯಾಗಿದೆ. ದೇವರು ಕೊಡುವಾತನು (ಯೋಹಾನ 3:16). ಆತನ ಕುಮಾರನು, ನಮ್ಮ ಆದರ್ಶನು, ಕೊಡುವಾತನೇ ಆಗಿದ್ದಾನೆ (ಗಲಾತ್ಯ 2:20). ದೇವರು ಆಜ್ಞಾಪಿಸಿದ್ದರಿಂದ "ದುಃಖದಿಂದಾಗಲೀ, ಬಲಾತ್ಕಾರದಿಂದಾ ಗಲೀ" ಕೊಡುವಂಥದ್ದನ್ನು ದೇವರು ಬಯಸುವದಿಲ್ಲ (2 ಕೊರಿಂಥ 9:7). ಕೊಡುವದರಲ್ಲಿ ತೊಡಗಿರುವವನ ಭಾಗವಾಗಿ ಸರಿಯಾದ ಉದ್ದೇಶದಿಂದ ಮಾಡಿರದಿದ್ದರೆ ಅದು ದೇವರ

ದೃಷ್ಟಿಯಲ್ಲಿ ಬರಿದಾದ, ಹುರುಳಿಲ್ಲದ ಕಾರ್ಯವಾಗಿರುವುದು.

*ಪ್ರಾರ್ಥನೆ ಮತ್ತು ಉಪವಾಸ.* ಪ್ರಾರ್ಥಿಸುವವರಿಗೆ ಮತ್ತು ಉಪವಾಸ ಮಾಡುವವರಿಗೆ ಸರಿಯಾದ ಉದ್ದೇಶವಿರಬೇಕೆಂದು ದೇವರು ನಿರೀಕ್ಷಿಸುತ್ತಾನೆ (ಮತ್ತಾಯ 6:5-7, 16-18). ಜನರಿಂದ ನೋಡುವುದಕ್ಕಾಗಿ ಪ್ರಾರ್ಥಿಸುವದನ್ನೂ ಉಪವಾಸ ಮಾಡುವುದನ್ನೂ ದೇವರು ತಿರಸ್ಕರಿಸುತ್ತಾನೆ (ಮತ್ತಾಯ 6:5-7). ಉದ್ದೇಶವಿಲ್ಲದ ಒಂದು ಕಾರ್ಯವು ದೇವರಿಗೆ ಸ್ವೀಕಾರ ಯೋಗ್ಯವಾಗಿರುವದಿಲ್ಲ.

*ಬೋಧನೆ.* ದೇವರು ತನ್ನ ಅನುಯಾಯಿಗಳು ಇತರರಿಗೆ ಬೋಧಿಸ ಬೇಕೆಂದು ಬಯಸುತ್ತಾನೆ (2 ತಿಮೊಥೆ 2:2). ಸರಿಯಾದ ಉದ್ದೇಶವಿಲ್ಲದವರಿಂದ ಸರಿಯಾದ ಬೋಧಿ ಸುವಿಕೆಯು ಆತನಿಗೆ ಸ್ವೀಕಾರ ಯೋಗ್ಯವಾಗಿದ್ದರೂ (ಫಿಲಿಪ್ಪಿ 1:15-18) ಸರಿಯಾದ ಉದ್ದೇಶವಿಲ್ಲದೆ ಸರಿಯಾದದ್ದನ್ನು ಬೋಧಿಸುವ ವ್ಯಕ್ತಿಯು ದೇವರಿಗೆ ಮೆಚ್ಚಿಕೆಯುಳ್ಳವ ನಾಗಿರುವದಿಲ್ಲ (1 ಕೊರಿಂಥ 9:16, 17). ಕಾರ್ಯವು ಸರಿಯಾಗಿರಬಹುದು ಆದರೆ ಉದ್ದೇಶವು ತಪ್ಪಾಗಿದ್ದರೆ ಕ್ರಿಯೆಯು ದೇವರಿಗೆ ಸ್ವೀಕಾರ ಯೋಗ್ಯವಾಗಿರುವದಿಲ್ಲ.

*ಹಾಡುವುದು.* ಹಾಡುವಿಕೆಯು ದೇವರಿಂದ ಆಜ್ಞಾಪಿಸಲ್ಪಟ್ಟಿದೆ (ಎಫೆಸ 5:19; ಕೊಲೆಸ್ಸೆ 3:16); ಹೀಗಿದ್ದರೂ, ಹಾಡಬೇಕೆಂದು ದೇವರು ಆಜ್ಞಾಪಿಸಿದ ಕಾರಣದಿಂದ ಹಾಡುವುದು ಸಾಕಷ್ಟಾಗಿರುವದಿಲ್ಲ. ಕರ್ತನಿಗೆ ಹೃದಯದಲ್ಲಿ ಗಾನದೊಂದಿಗೆ ಕೂಡಿರುವ ಹಾಡುವಿಕೆಯನ್ನು ದೇವರು ಅಪೇಕ್ಷಿಸುತ್ತಾನೆ (ಎಫೆಸ 5:19). ಸರಿಯಾದ ಉದ್ದೇಶವೂ, ಅಭಿಪ್ರಾಯವೂ ದೇವರಿಗೆ ಸ್ವೀಕಾರವಾಗುವ ಹಾಡುವಿಕೆಯ ಕಾರ್ಯಮಾಡಲು ಇರತಕ್ಕದ್ದು.

*ಕರ್ತನ ಭೋಜನ.* ಕರ್ತನ ಭೋಜನವು ದೇವರಿಂದಾದ ಇನ್ನೊಂದು ಆಜ್ಞೆಯಾಗಿದೆ (1 ಕೊರಿಂಥ 11:23-26). ಕರ್ತನ ಭೋಜನವನ್ನು ತಿಂದು ಕುಡಿಯುತ್ತಿರುವ ಕ್ರೈಸ್ತನಿಗೆ, “ನೀನು ಯಾಕೆ ಇದನ್ನು ಮಾಡುತೀ?” ಎಂದು ಕೇಳಬಹುದು.

“ರೊಟ್ಟಿಯನ್ನು ತಿಂದು ಪಾತ್ರೆಯಲ್ಲಿ ಕುಡಿಯಬೇಕು ಎಂದು ದೇವರು ನಮಗೆ ಆಜ್ಞಾಪಿಸಿದ್ದಾನೆ” ಎಂದು ಅವನು ಉತ್ತರ ಕೊಡಬಹುದು.

“ನೀನು ತಿನ್ನುವುದು ಮತ್ತು ಕುಡಿಯುವುದು ಯಾವ ಉದ್ದೇಶದಿಂದ?” ಎಂದು ನೀವು ಕೇಳಬಹುದು.

“ತಿನ್ನ ಬೇಕು ಮತ್ತು ಕುಡಿಯ ಬೇಕು ಎಂದು ದೇವರು ಆಜ್ಞಾಪಿಸಿದ್ದಾನೆ” ಎಂದು ಉತ್ತರವಿರಬಹುದು.

ಆಗ ನಾವು “ತಿನ್ನುವುದಕ್ಕಾಗಿ ಮತ್ತು ಕುಡಿಯುವುದಕ್ಕಾಗಿ ಉದ್ದೇಶವಿಲ್ಲವೇ?” ಎಂದು ಪ್ರಶ್ನಿಸಬಹುದು.

“ಉದ್ದೇಶವು ನನಗೆ ತಿಳಿದಿರುವದಿಲ್ಲ. ದೇವರು ಆಜ್ಞಾಪಿಸಿದ್ದಾನೆ ಎಂಬುದನ್ನಷ್ಟನ್ನೇ ನಾನು ತಿಳಿದಿರುವೆನು. ಆದುದರಿಂದ ನಾನು ಅದನ್ನು ಮಾಡುತ್ತಿರುವೆನು” ಎಂದು ಉತ್ತರವು ಕೊಡಲ್ಪಡಬಹುದು.

ರೊಟ್ಟಿ ಮತ್ತು ಯೇಸುವಿನ ದೇಹ, ಹಾಗೂ ಪಾತ್ರೆ ಮತ್ತು ರಕ್ತ ಇವುಗಳ ಮಧ್ಯದಲ್ಲಿಯ ಸಂಬಂಧದ ಬಗ್ಗೆ ತಿಳುವಳಿಕೆಯಿಲ್ಲದಿದ್ದರೆ ಅದು ಅಂಥ ಕುರುಡು ವಿಧೇಯತೆಯಾಗಿರಬಹುದು.

ಕಾರ್ಯವು ಸರಿಯಾದದ್ದಾಗಿರಬಹುದು, ಆದರೆ ಉದ್ದೇಶವೂ ಅಭಿಪ್ರಾಯವೂ ತಪ್ಪಾಗಿರಬಹುದು. ಕಾರ್ಯವು ತನ್ನಷ್ಟಕ್ಕೆ ಸಾಕಾಗದು. ಯಾಕಂದರೆ ಉದ್ದೇಶವೂ ಅಭಿಪ್ರಾಯವೂ ಸಹ ಕಾರ್ಯವು ದೇವರಿಗೆ ಸ್ವೀಕಾರ ಯೋಗ್ಯವಾಗಿರಲು

ಸರಿಯಾದದ್ದಾಗಿರ ಬೇಕು (1 ಕೊರಿಂಥ 11:27-31).

**ಅಭಿಪ್ರಾಯ ಮತ್ತು ಉದ್ದೇಶ**

ಹೆಚ್ಚಾದ ಸಂಗತಿಗಳಲ್ಲಿ ಕೃತ್ಯದ ಉದ್ದೇಶವು ಆ ಕೃತ್ಯವು ಸರಿಯಾಗಿದೆಯೋ, ತಪ್ಪಾಗಿದೆಯೋ ಎಂಬುದು ನಿರ್ಧರಿಸಲ್ಪಡುತ್ತದೆ: ವ್ಯಭಿಚಾರ ಇಲ್ಲವೇ ಕುಡಿಕತನದಂತ ಇತರ ಕೃತ್ಯಗಳು, ಅವುಗಳ ಉದ್ದೇಶವು ಯಾವುದೇ ಇದ್ದರೂ ಪಾಪಭರಿತವಾದವುಗಳೂ ಪಾಪಗಳೂ ಆಗಿರುತ್ತವೆ.

"... ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು" (ಮತ್ತಾಯ 5:28) ಎಂದು ಯೇಸು ಹೇಳಿದ್ದಾನೆ. ಸ್ತ್ರೀಯ ಕಡೆಗೆ ನೋಡುವುದು ಹೃದಯದಲ್ಲಿ ಪಾಪವಾಗಿದೆ ಎಂದು ಯೇಸು ಹೇಳಲಿಲ್ಲ. ಯಾಕಂದರೆ ತಪ್ಪಾದ ಉದ್ದೇಶವನ್ನು ಒಳಗೊಂಡಿರದೆ ಇದ್ದ ನೋಟವು ಹೃದಯದಲ್ಲಿ ವ್ಯಭಿಚಾರವಾಗಿರುವದಿಲ್ಲ. ಒಬ್ಬ ಸ್ತ್ರೀಯ ಕಡೆಗೆ ಕಾಮದಿಂದ, ಲೈಂಗಿಕ ತೃಪ್ತಿಗಾಗಿ ಆಕೆಯನ್ನು ಅಪೇಕ್ಷಿಸುವದರಿಂದ ನೋಡುವಲ್ಲಿ ತನ್ನ ಹೃದಯದಲ್ಲಿ ಆಕೆಯೊಂದಿಗೆ ವ್ಯಭಿಚಾರ ಮಾಡಿದವನಾಗುತ್ತಾನೆ. ನೋಡುವ ಕಾರ್ಯವು ಸರಿಯಾಗಿಯೂ ಇಲ್ಲ, ತಪ್ಪಾಗಿಯೂ ಇಲ್ಲ. ಉದ್ದೇಶವು ಭಿನ್ನತೆಯನ್ನು ಮಾಡುತ್ತದೆ.

ಕಾರ್ಯಗಳಲ್ಲಿ ತೊಡಗುವ ವ್ಯಕ್ತಿಯ ಉದ್ದೇಶಕ್ಕೆ ಅನುಗುಣವಾಗಿ ಹೆಚ್ಚಾದ ಕಾರ್ಯಗಳು ಸರಿಯಾಗಿರುತ್ತವೆ ಇಲ್ಲವೆ ತಪ್ಪಾಗಿರುತ್ತವೆ. ದೇವರು ಆಜ್ಞಾಪಿಸಿದ್ದನ್ನು ಮಾಡುವದರಿಂದ ಆತನಿಗೆ ವಿಧೇಯನಾಗುವುದು ಮಹತ್ವದ್ದಾಗಿದೆ. ಆದರೆ ಅಂಥ ವಿಧೇಯತೆಯು ಸಾಕಾಗದು. ಸರಿಯಾದ ಉದ್ದೇಶದ್ದಾಗಿರುವ ವಿಧೇಯತೆಯನ್ನು ಮಾತ್ರವೇ ದೇವರು ಸ್ವೀಕರಿಸುತ್ತಾನೆ.

## ಮುಕ್ತಾಯ

ಹೊಸ ಒಡಂಬಡಿಕೆಯಲ್ಲಿ ದೇವರು ಸರಿಯಾದ ತಿಳುವಳಿಕೆ, ಉದ್ದೇಶ ಹಾಗೂ ಅಭಿಪ್ರಾಯಗಳಿಂದ ಒಳಗೊಂಡ ವಿಶ್ವಾಸದ ಮೇಲೆ ಅವಲಂಭಿಸಿದ ಕಾರ್ಯವನ್ನು ಕೇಳುತ್ತಾನೆ. ಸರಿಯಾದ ತಿಳುವಳಿಕೆ ಮತ್ತು ಉದ್ದೇಶದ ಮೇಲೆ ಅವಲಂಭಿಸಿದ ಉತ್ತರವನ್ನು ಕೇಳಿದ ಕಾರ್ಯವನ್ನು ದೇವರು ಕೇಳಿದರೆ ಆಗ ಆತನಿಗೆ ಕುರುಡು ವಿಧೇಯತೆಯು ಬೇಕಾಗುತ್ತದೆ, ಆದರೆ ಆಶೀರ್ವಾದದಲ್ಲಿಯ ವಿಶ್ವಾಸದ ಕಾರ್ಯವಲ್ಲ. ವಿಧೇಯತೆಯ ನಂಬಿಕೆಯು (ರೋಮಾಪುರ 1:5; ಎಫೆಸ 2:8; ಇಬ್ರಿಯ 5:9) ರಕ್ಷಣೆಯ ತಳಹದಿಯಾಗಿದ್ದು, ಅದು ದೇವರ ವಾಗ್ದಾನದ ತಿಳುವಳಿಕೆಯನ್ನು, ಅದರಲ್ಲಿ ನಂಬಿಕೆಯನ್ನು ಎರಡನ್ನೂ ಒಳಗೊಂಡಿರತಕ್ಕದ್ದು. ಇಲ್ಲದಿದ್ದರೆ ವಿಧೇಯತೆಯು ದೇವರ ವಾಗ್ದಾನದಲ್ಲಿ ವಿಶ್ವಾಸದ ಕಾರ್ಯವಾಗಿರುವದಿಲ್ಲ, ಆದರೆ ಕುರುಡು ವಿಧೇಯತೆಯ ಕಾರ್ಯವಾಗಿರುವುದು. ಕುರುಡು ವಿಧೇಯತೆಯ ಕಾರ್ಯಗಳನ್ನು ನಂಬುವವರು ಅಭಿಪ್ರಾಯ ಮತ್ತು ಉದ್ದೇಶದ ಸರಿಯಾದ ತಿಳುವಳಿಕೆಯ ಕೊರತೆಯಿರುವವರು ದೇವರಿಗೆ ಸ್ವೀಕಾರಯೋಗ್ಯರಾಗಿರಬೇಕಾದರೆ ಅಂಥ ಕೃತ್ಯಗಳು ರಕ್ಷಣೆಯನ್ನು ತರುವವೆಂದು ತಿಳಿಯುವ ಮೊದಲು ಇದಕ್ಕೆ ಸಂಬಂಧಿಸಿದ ಉದಾಹರಣೆಗಳನ್ನೂ, ಹೇಳಿಕೆಗಳನ್ನೂ ಹೊಸ ಒಡಂಬಡಿಕೆಯಲ್ಲಿ ಕಂಡುಕೊಳ್ಳತಕ್ಕದ್ದು.

ನಂಬಿಕೆಯ ಮೂಲ ಸೂತ್ರವು ಈ ಕೆಳಗಿನದನ್ನು ಒಳಗೊಂಡಿರುತ್ತದೆ.

(1) ಏನು ವಾಗ್ದಾನ ಮಾಡಲ್ಪಟ್ಟಿದೆ ಎಂಬುದನ್ನು ಒಬ್ಬನು ಅರ್ಥ ಮಾಡಿಕೊಳ್ಳ

ತಕ್ಕದ್ದು. ನಂಬಿಕೆಯು ದೇವರ ವಾಕ್ಯದ ಮೇಲೆ ಅವಲಂಭಿಸಿರುತ್ತದೆ (ರೋಮಾಪುರ 10:17); ಇದು ತಿಳುವಳಿಕೆಗೆ ಅನ್ವಯಿಸುತ್ತದೆ.

(2) ದೇವರು ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸಲು ಶಕ್ತನಾಗಿದ್ದಾನೆಂದು ಒಬ್ಬನು ನಂಬತಕ್ಕದ್ದು. "ಆತನು ತನ್ನ ವಾಗ್ದಾನವನ್ನು ನೆರವೇರಿಸುವುದಕ್ಕೆ ಸಮರ್ಥನೆಂದು ಪೂರಾ ಭರವಸವುಳ್ಳವನಾಗಿದ್ದನು" ಎಂದು ಅಬ್ರಹಾಮನು ತಿಳಿದಿದ್ದನೆಂದು ಪೌಲನು ಬರೆದನು (ರೋಮಾಪುರ 4:21).

(3) ವಾಗ್ದಾನ ಮಾಡಿದಾತನು ನಂಬಲು ಅರ್ಹನೆಂದು ಒಬ್ಬನು ಯೋಚಿಸತಕ್ಕದ್ದು. ದೇವರಲ್ಲಿಯ ಸರಳ ನಂಬಿಕೆಯನ್ನು ಕುರಿತು, "ವಾಗ್ದಾನ ಮಾಡಿದಾತನನ್ನು ನಂಬತಕ್ಕವನೆಂದು ಎಣಿಸಿದರು" ಎಂದು ಬರೆಯಲ್ಪಟ್ಟಿದೆ (ಇಬ್ರಿಯ 11:11).

(4) ಬೇಕಾಗಿದ್ದ ಕೃತಿಯ ಮತ್ತು ಅಪೇಕ್ಷಿತ ಲಾಭದ ಮಧ್ಯದಲ್ಲಿ ಯಾವುದೇ ಲೌಕಿಕ ಸಂಬಂಧದ ಅಸ್ತಿತ್ವವು ಇರುವ ಅಗತ್ಯತೆಯಿರುವದಿಲ್ಲ. ಇಸ್ರಯೇಲ್ಯರು ತಮ್ಮ ಕೃತಿ ಹಾಗೂ ಯೆರಿಕೋವಿನ ಗೋಡೆಗಳು ಬೀಳುವಿಕೆಯ ಮಧ್ಯದಲ್ಲಿ ತಾರ್ಕಿಕ ಸಂಬಂಧವನ್ನು ತಿಳಿಯಲು ಶಕ್ತರಾಗಲಿಲ್ಲ. ದೇವರಲ್ಲಿಯ ತಮ್ಮ ವಿಶ್ವಾಸದ ನಿಮಿತ್ತ, ಅವರು ಸುತ್ತಿದರು, ಗಟ್ಟಿಯಾಗಿ ಕೂಗಿದರು ಮತ್ತು ಕೊಂಬುಗಳನ್ನು ಊದಿದರು. ಅವರು ದೇವರಲ್ಲಿ ನಂಬಿಕೆಯಿಂದ ಕಾರ್ಯಮಾಡಿದರು. ಆದರೆ ನೋಟದಿಂದ ಅಲ್ಲ (ಇಬ್ರಿಯ 11:30; 2 ಕೊರಿಂಥ 5:7).

(5) ಸ್ವಾರ್ಥ ಸಾಧನೆಯಲ್ಲಿ ಅಲ್ಲದೆ ದೇವರು ಸಾಧಿಸುವದರಲ್ಲಿ ನಂಬಿಕೆಯು ಇಡಲ್ಪಟ್ಟಿದೆ. ದೇವರು ತಾನು ವಾಗ್ದಾನ ಮಾಡಿದ್ದನ್ನು ಪೂರೈಸಲು ಶಕ್ತನೆಂದು ಅಬ್ರಹಾಮನು ನಂಬಿದನು (ರೋಮಾಪುರ 4:21). ಯೆರಿಕೋವಿನ ಸುತ್ತ ಸುತ್ತಿದವರು ತಮ್ಮ ಸಾಮರ್ಥ್ಯವಲ್ಲ ಆದರೆ ದೇವರ ಶಕ್ತಿಯು ಪಟ್ಟಣದ ಗೋಡೆಗಳನ್ನು ಕೆಡವಿ ಹಾಕುವದೆಂದು ನಂಬಿದರು. ಅಸಾಧಾರಣವಾದವುಗಳೂ ಸಂಭವಿಸುತ್ತವೆ. ದೇವರು ಅಪ್ಪಣೆ ಕೊಟ್ಟನು ಹಾಗೂ ಅಪೇಕ್ಷಿತ ಪರಿಣಾಮಗಳನ್ನು ಪೂರೈಸುವ ಕಾರ್ಯಕ್ಕೆ ಅವನನ್ನು ಪ್ರೇರೇಪಿಸಲು ಮನುಷ್ಯನ ನಂಬಿಕೆಯೂ ಬೇಕಾಗಿತ್ತು. ತನ್ನ ಕುಟುಂಬವನ್ನು ರಕ್ಷಿಸಲು ನೋಹನು (ಇಬ್ರಿಯ 11:7) ನಾವೆಯನ್ನು ಕಟ್ಟುವಂಥದ್ದು ಅಂಥ ಅಸಾಧಾರಣವಾದದ್ದಾಗಿದೆ.

(6) ದೇವರು ವಾಗ್ದಾನವನ್ನು ಹೇಗೆ ನೆರವೇರಿಸುವನು ಎಂಬುದನ್ನು ಒಬ್ಬನು ತಿಳಿಯದಿದ್ದರೂ ವಿಶ್ವಾಸವು ಆ ವಾಗ್ದಾನವನ್ನು ನೆರವೇರಿಸಲು ದೇವರ ಶಕ್ತಿಯನ್ನು ಸ್ವೀಕರಿಸುವುದು. ಉದಾಹರಣೆಯಾಗಿ ಅಬ್ರಹಾಮನಿಗೆ ಅವನ ಮಗನ ಮುಖಾಂತರ ವಾಗಿ ಜನ ಸಮೂಹವನ್ನು ಕೊಡುವೆನೆಂದು ದೇವರು ವಾಗ್ದಾನ ಮಾಡಿದ್ದನು. ಆ ಮಗನನ್ನೆ ಬಲಿಯಾಗಿ ಅರ್ಪಿಸಲು ಅಬ್ರಹಾಮನು ಸಿದ್ಧನಾಗಿದ್ದನು (ಇಬ್ರಿಯ 11:17-19). ದೇವರು ಅದನ್ನು ಹೇಗೆ ಮಾಡುವನೆಂದು ಅವನು ತಿಳಿದಿರಲಿಲ್ಲ. ಆದರೆ ದೇವರು ಅದನ್ನು ಮಾಡುವನೆಂದು ಅವನು ನಂಬಿದನು. ತನ್ನ ವಾಗ್ದಾನವನ್ನು ಕೈಕೊಳ್ಳುವನೆಂದು ದೇವರಲ್ಲಿ ನಂಬಿಕೆಯೊಂದಿಗೆ ಅಬ್ರಹಾಮನು ದೇವರ ಆಜ್ಞೆಗೆ ವಿಧೇಯನಾದನು.

(7) ವಿಶ್ವಾಸವು ಕುರುಡು ವಿಧೇಯತೆಯ ತತ್ವವನ್ನು ದಾಟಿಹೋಗುತ್ತದೆ. ದೇವರಲ್ಲಿ ಇಡುವುದಕ್ಕಾಗಿ ನಂಬಿಕೆಗೆ ಭರವಸೆಯ ಅಗತ್ಯತೆಯಿದೆ. ಅಗತ್ಯವಾಗಿರುವದನ್ನು ಮನುಷ್ಯನು ಮಾಡಿದರೆ ದೇವರು ತಾನು ವಾಗ್ದಾನ ಮಾಡಿದ್ದನ್ನು ಮಾಡುವನು.

ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ (ಇಬ್ರಿಯ 11:6). ದೇವರಿಗೆ ಮೆಚ್ಚಿಗೆಯನ್ನುಂಟುಮಾಡುವವರಿಂದ ದೇವರು ಅಪೇಕ್ಷಿಸುವ ನಂಬಿಕೆಯು, ದೇವರು ತಾನು ಮಾಡುವೆನೆಂದು ವಾಗ್ದಾನ ಮಾಡಿದ್ದನ್ನು ಮಾಡುವೆನೆಂದು ನಂಬಿಕೆಯಿಂದ ನಂಬುವ ಕಾರಣದಿಂದ ಕಾರ್ಯಮಾಡುವ ನಂಬಿಕೆಯಾಗಿದೆ.

ದೇವರು ಅಸ್ತಿತ್ವದಲ್ಲಿದ್ದಾನೆಂದು ಸ್ವೀಕರಿಸುವದಕ್ಕಿಂತಲೂ ಹೆಚ್ಚಾದದ್ದು ದೇವರಲ್ಲಿಯ ವಿಶ್ವಾಸವು ಒಳಗೊಂಡಿರುತ್ತದೆ. ತನ್ನ ಚಿತ್ತವನ್ನು ಮಾಡಲು ಹುಡುಕುವವರಿಗೆ ಆತನು ಬಹುಮಾನ ಕೊಡುವನೆಂಬ ನಂಬಿಕೆಯು ಅವರಲ್ಲಿರುವುದನ್ನು ದೇವರು ಅಪೇಕ್ಷಿಸುತ್ತಾನೆ (ಇಬ್ರಿಯ 11:6). ದೇವರು ಕೊಡುವ ಬಹುಮಾನವನ್ನು ಒಬ್ಬನು ಅರ್ಥ ಮಾಡಿಕೊಳ್ಳದೆ ಕಾರ್ಯ ಮಾಡಿದರೆ, ತನ್ನ ಕಾರ್ಯಕ್ಕೆ ಬಹುಮಾನ ಕೊಡಲು ದೇವರಲ್ಲಿ ನಂಬಿಕೆಯಿಂದ ಕಾರ್ಯ ಮಾಡಿದಂತಾಗುವದಿಲ್ಲ. ಒಬ್ಬನು ವಾಗ್ದಾನಕ್ಕೆ ವಿಧೇಯನಾಗದವನು ದೇವರು ವಾಗ್ದಾನ ಮಾಡಿದ್ದನ್ನು ಸ್ವೀಕರಿಸುವುದಕ್ಕಾಗಿ ಆತನಲ್ಲಿ ನಂಬಿಕೆಯಿಂದ ಕಾರ್ಯ ಮಾಡಬಹುದು.

ಕುರುಡು ವಿಧೇಯತೆಯನ್ನು ಇಲ್ಲವೇ ಬರಿದಾದ ಧಾರ್ಮಿಕ ಆಚರಣೆಯನ್ನು ದಾಟಿ ಹೋಗುವುದಕ್ಕಾಗಿ ಬಾಪ್ತಿಸ್ಮವು ಈ ಅಧ್ಯಾಯದ ಪ್ರಾರಂಭದಲ್ಲಿ ಪಟ್ಟಿ ಮಾಡಿದ ಐದರಲ್ಲಿ ಕೇವಲ ಒಂದು ಕ್ರಮಕ್ಕೆ (ಕ್ರಮ 4) ವರ್ಗೀಕರಿಸಬಹುದು. ದೇವರಿಂದ ವಾಗ್ದಾನ ಮಾಡಲ್ಪಟ್ಟ ಆಶೀರ್ವಾದವನ್ನು ಸ್ವೀಕರಿಸುವದಕ್ಕಾಗಿ ಬಾಪ್ತಿಸ್ಮವು ವಿಶ್ವಾಸದ ಕಾರ್ಯವಾಗಿದೆ, ಕೃತಿಯಿಲ್ಲದ ವಿಶ್ವಾಸವಾಗಿರುವದಿಲ್ಲ, ಕುರುಡು ವಿಧೇಯತೆಯಾಗಿರುವದಿಲ್ಲ, ಪರಿಣಾಮ ಸಾಧಿಸಲು ಕಾರ್ಯವನ್ನು ಪ್ರೀತಿಸುವ ನಂಬಿಕೆಯಿಲ್ಲ ಹಾಗೂ ಇತರರ ನಂಬಿಕೆಯೂ ಅಲ್ಲ. ಅನಂತರದಲ್ಲಿ ಹೇಳಲ್ಪಡಲಿಕ್ಕಿರುವ ಬಾಪ್ತಿಸ್ಮದ ಮೇಲಿನ ಪೌಲನ ಚರ್ಚೆಯು ಬಾಪ್ತಿಸ್ಮವನ್ನು ಕುರುಡು ವಿಧೇಯತೆಗಿಂತ ಹೆಚ್ಚಾದದ್ದು ಎಂಬಂತೆ ವಿವರಿಸುತ್ತದೆ.

ದೇವರ ವಾಗ್ದಾನದ ಆಶೀರ್ವಾದವನ್ನು ಸಾಧಿಸುವದಕ್ಕಾಗಿ ಅಲ್ಲ, ಆದರೆ ವಾಗ್ದಾತ್ತ ದೇವರ ಆಶೀರ್ವಾದವನ್ನು ಪಡೆದು ಕೊಳ್ಳುವದಕ್ಕೆ ನಂಬಿಕೆಯಿಂದ ಕಾರ್ಯದ ಅಗತ್ಯತೆಗಳಿಗೆ ಬಾಪ್ತಿಸ್ಮ ಹೊಂದಿಕೊಳ್ಳುತ್ತದೆ. ಬಾಪ್ತಿಸ್ಮ ಮತ್ತು ಪಾಪಗಳ ಕ್ಷಮಾಪಣೆಯ ಮಧ್ಯದಲ್ಲಿ ತಾರ್ಕಿಕ ಸಂಬಂಧವನು ಊಹಿಸಲಿಕ್ಕಾಗದಿದ್ದರೂ ಕರ್ತನ ಭೋಜನದಲ್ಲಿ ಇರುವಂತೆ ಬಾಪ್ತಿಸ್ಮ ಮತ್ತು ಯೇಸುವಿನ ವಿಮೋಚನಾಕಾರ್ಯದ ಮಧ್ಯದಲ್ಲಿ ಒಂದು ತಿಳುವಳಿಕೆಯು ಇರಬೇಕು. ಕರ್ತನ ಭೋಜನದಲ್ಲಿ ಹುಳಿಯಿಲ್ಲದ ರೊಟ್ಟಿಯನ್ನು ತಿನ್ನುವುದರಲ್ಲಿಯೂ ಪಾತ್ರೆಯಲ್ಲಿ ಕುಡಿಯುವುದರಲ್ಲಿಯೂ ಒಬ್ಬನು ಆತ್ಮಿಕ ಅರ್ಥದಲ್ಲಿ ಯೇಸುವಿನ ದೇಹ ಮತ್ತು ರಕ್ತದಲ್ಲಿ ಪಾಲುಗೊಳ್ಳುತ್ತಾನೆ (1 ಕೊರಿಂಥ 10:16; 11:23-26). ಬಾಪ್ತಿಸ್ಮದಲ್ಲಿ ಒಬ್ಬನು ಬೋಧನೆಗೆ ಹೃದಯದಿಂದ ವಿಧೇಯನಾಗುವಾಗ ಯೇಸುವಿನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನದಲ್ಲಿ ಪಾಲುಗಾರನಾಗುತ್ತಾನೆ (ರೋಮಾಪುರ 6:4-6, 17, 18; ಕೊಲೊಸ್ಸೆ 2:12). ಅಂಥ ತಿಳುವಳಿಕೆ ಮತ್ತು ಆತ್ಮೀಕ ಒಳಗೊಳ್ಳುವಿಕೆ ಇಲ್ಲದಿದ್ದರೆ ಕರ್ತನ ಭೋಜನ ಮತ್ತು ಬಾಪ್ತಿಸ್ಮ ಎರಡೂ ಕುರುಡು ವಿಧೇಯತೆಯ ಬರಿದಾದ ಧರ್ಮಾಚರಣೆಗಳಾಗುವವು.

ಬಾಪ್ತಿಸ್ಮಕ್ಕೆ ಪಾಪಗಳನ್ನು ಕ್ಷಮಿಸುವ ಸಹಜವಾದ ಬಲವಿರುವದಿಲ್ಲ. ತನ್ನನ್ನು ಬಾಪ್ತಿಸ್ಮಕ್ಕೆ ಒಪ್ಪಿಸಿಕೊಡುವವನು ತನ್ನ ಸ್ವಂತ ಸಾಮರ್ಥ್ಯದ ಮೇಲೆ ಅಲ್ಲ, ತನಗೆ ಬಾಪ್ತಿಸ್ಮ ಕೊಡುವವರ ಮೇಲೆ ಅಲ್ಲ, ನೀರಿನಲ್ಲಿ ಅಲ್ಲ, ಆದರೆ ತನ್ನ ಪಾಪಗಳನ್ನು ಕ್ಷಮಿಸಲು ಯೇಸುವಿನ ರಕ್ತದಲ್ಲಿ ತನ್ನ ವಿಶ್ವಾಸವನ್ನಿಡ ಬೇಕೆಂಬುದು ಇದರ ಅರ್ಥ (ಅಪೊಸ್ತಲರ ಕೃತ್ಯ 2:38). ಒಬ್ಬ ವ್ಯಕ್ತಿಯು ಬಾಪ್ತಿಸ್ಮ ಹೊಂದುವಾಗ ಬಾಪ್ತಿಸ್ಮ, ಯೇಸುವಿನ ರಕ್ತ ಮತ್ತು ಪಾಪಗಳ ಕ್ಷಮಾಪಣೆಯ ಮಧ್ಯದಲ್ಲಿಯ ಸಂಬಂಧವನ್ನು ಅರ್ಥ ಮಾಡಿಕೊಳ್ಳದಿದ್ದರೆ ಅವನಿಗೆ ರಕ್ಷಿಸುವ ನಂಬಿಕೆಯು ಇರುವ ಸಾಧ್ಯತೆ ಯಿರುವದಿಲ್ಲ. ಯೇಸುವಿನ ರಕ್ತದ ಶುದ್ಧೀಕರಿಸುವ ಶಕ್ತಿಯಲ್ಲಿಯ ವಿಶ್ವಾಸದಿಂದ ಬಾಪ್ತಿಸ್ಮವನ್ನು ಬೇರೆ ಮಾಡುವ ಯಾವುದೇ ಬೋಧನೆಯು ಆತನ ರಕ್ತದಲ್ಲಿ ವಿಶ್ವಾಸವಿಲ್ಲದ ಬರಿದಾದ ಧರ್ಮಾಚರಣೆಯಾಗುವುದು.

ಕೆಲವು ಕೃತ್ಯಗಳು ತಮ್ಮಲ್ಲಿ ತಾವೇ ತಪ್ಪಾದವುಗಳಾಗಿರುತ್ತವೆ (ಉದಾ. ವ್ಯಭಿಚಾರ) ಮತ್ತು ಕೆಲವು ಅವುಗಳಿಗೆ ಸಂಬಂಧಿಸಿದ ಉದ್ದೇಶದ ಮೇಲೆ ಅವಲಂಭಿಸಿ ಸರಿಯಾದವುಗಳೂ ಇಲ್ಲವೇ ತಪ್ಪಾದವುಗಳೂ ಆಗಿರುತ್ತವೆ (ಉದಾ. ಒಬ್ಬ ಪುರುಷನು ಒಬ್ಬ ಸ್ತ್ರೀಯ ಕಡೆಗೆ ನೋಡುವುದು). ಬಾಪ್ತಿಸ್ಮದಲ್ಲಿ ಯಾವುದೂ ಕಾರ್ಯವನ್ನು ಸ್ವಾಭಾವಿಕವಾಗಿ ಸರಿಯಾದದ್ದನ್ನಾಗಿಯೂ ಇಲ್ಲವೇ ತಪ್ಪಾದದ್ದಾನ್ನಾಗಿಯೂ ಮಾಡುವದಿಲ್ಲ. ಆದುದರಿಂದ ಕಾರ್ಯದೊಂದಿಗೆ ಸಂಬಂಧಿಸಿದ ನಂಬಿಕೆಗೆ ಮತ್ತು ಉದ್ದೇಶಕ್ಕೆ ಅನುಗುಣವಾಗಿ ಮಾತ್ರವೇ ಅದು ಸ್ವೀಕಾರ ಯೋಗ್ಯವಾದದ್ದು ಇಲ್ಲವೇ ಸ್ವೀಕರಿಸಲ್ಪಡಲಾರದ್ದು ಆಗಿರತಕ್ಕದ್ದು.

© 2009 Truth for Today